ಸಂಚಾಲಕರಾಗಿರುವ ತಾಲ್ಲೂಕು ಸಮನ್ವಯ ಸಮಿತಿಯೊಂದನ್ನು ರಚಿಸಬೇಕೆಂದು ಸದರಿ ಸಮಿತಿಯಲ್ಲಿ ಕೆಳಕಂಡ ಸದಸ್ಯರಿರಬೇಕೆಂದೂ ಈ ಸಭೆಯವರು ಅಭಿಪ್ರಾಯಪಡುತ್ತಾರೆ :—

೧.	ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರು	...	ಸದಸ್ಯರು
೨.	ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಹಕಾರೀ ಸಂಘದ ಅಧ್ಯಕ್ಷರು	...	,,
೩.	ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರು	...	,,
೪.	ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಂಘದ ಅಧ್ಯಕ್ಷರು	...	,,
೫.	ತಾಲ್ಲೂಕು ಹರಿಜನ-ಗಿರಿಜನ ಗೃಹನಿರ್ಮಾಣ ಸಹಕಾರೀ ಸಂಘದ ಅಧ್ಯಕ್ಷರು	...	,,
೬.	ಗ್ರಾಮಪಂಚಾಯತಿಗಳ ಅಧ್ಯಕ್ಷರುಗಳು	...	,,
೭.	ತಾಲ್ಲೂಕು ಕೇಂದ್ರ ಸಹಕಾರಿ ಬ್ಯಾಂಕಿನ ಅಧಿಕಾರಿಗಳು	...	,,
೮.	ಲೋಕೋಪಯೋಗಿ ಇಲಾಖೆಯ ಸಹಾಯಕ ಇಂಜಿನಿಯರವರು	...	,,
೯.	ಕರ್ನಾಟಕ ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯ ಸಹಾಯಕ ಇಂಜನಿಯರವರು	...	,,
೧೦.	ಸಹಾಯಕ ಶಿಕ್ಷಣಾಧಿಕಾರಿಗಳು	...	,,
೧೧.	ಸಹಾಯಕ ಪಶು ವೈದ್ಯರು	...	,,
೧೨.	ಅರಣ್ಯ ವಲಯಾಧಿಕಾರಿಯವರು	...	,,
೧೩.	ಕ್ಷೇತ್ರಾಭಿವೃದ್ಧಿ ಅಧಿಕಾರಿಯವರು	...	,,
೧೪.	ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಅಧ್ಯಕ್ಷರುಗಳು	...	,,
೧೫.	ವೈಧ್ಯಾಧಿಕಾರಿಯವರು	...	,,

(*The Resolution was negatived*).

(iii) re : Providing Rs. 10 crores for Minor Irrigation Works in Budget for 1975-76.

MR. DEPUTY SPEAKER.—Next resolution. Sri Lingareddy to move. But he is not here. Next resolution Sri G. Puttaswamy to move.

ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—ನನ್ನ ನಿರ್ಣಯ ಈ ರೀತಿ ಇದೆ :—

"ಸಣ್ಣ ನೀರಾವರಿ ಕಾರ್ಯಕ್ರಮಗಳಿಗಾಗಿ ೧೯೭೫-೭೬ನೇ ಸಾಲಿನ ಆಯವ್ಯಯ ಮುಂಗಡ ಪತ್ರದಲ್ಲಿ ೧೦ ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದು ಸರ್ಕಾರದವರಿಗೆ ಈ ಸಭೆಯವರು ಶಿಫಾರಸು ಮಾಡುತ್ತಾರೆ".

ಉಪಾಧ್ಯಕ್ಷರು.—ಶ್ರೀ ಪುಟ್ಟಸ್ವಾಮಿಯವರ ನಿರ್ಣಯ ಸಭೆಯಮುಂದೆ ಮಂಡಿಸಲಾಗಿದೆ. ಅದು ಈರೀತಿ ಇದೆ :—

"ಸಣ್ಣ ನೀರಾವರಿ ಕಾರ್ಯಕ್ರಮಗಳಿಗಾಗಿ ೧೯೭೫-೭೬ನೇ ಸಾಲಿನ ಆಯವ್ಯಯ ಮುಂಗಡದ ಪತ್ರದಲ್ಲಿ ೧೦ ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದು ಸರ್ಕಾರದವರಿಗೆ ಈ ಸಭೆಯವರು ಶಿಫಾರಸು ಮಾಡುತ್ತಾರೆ."

SRI S. BANGARAPPA.—On a point of order. Resolution No. 2 is similar to resolution No. 5 sent by Sri T. R. Shammanna The convention is if a resolution is similar, the other Hon. Member who has sent it can move it.

MR. DEPUTY SPEAKER.—It has to come by the order of ballot If the hon. member in whose name the resolution stands has authorised him, then he can move. The rules are clear. Sri G. Puttaswamy to continue.

ಶ್ರೀ ಜಿ. ಪುಟ್ಟಸ್ವಾಮಿ.—ಸನ್ಮಾನ್ಯ ಅಧ್ಯಕ್ಷರೇ, ಈ ನಿರ್ಣಯವನ್ನು ಮಂಡಿಸುತ್ತಾ, ಈ ರಾಜ್ಯದಲ್ಲಿ ಅನೇಕ ತಾಲ್ಲೂಕುಗಳಲ್ಲಿ ಸಣ್ಣ ನೀರಾವರಿ ಕಾಮಗಾರಿಗಳು ಸ್ಥಾಪಿತವಾಗಿಲ್ಲ ಎಂದು ವಿಷಾದದಿಂದ ಹೇಳುತ್ತೇನೆ. ದೇಶದಲ್ಲಿ ಅದರಲ್ಲೂ ಮಲೆನಾಡಿನಲ್ಲಿ ಹೇರಳವಾಗಿ ಮಳೆಯಾಗುತ್ತದೆ. ಆ ಮಳೆ ನೀರಿನ ಸಂಪತ್ತನ್ನು ಉಪಯೋಗಿಸಿಕೊಂಡು ಒಂದೊಂದು ತಾಲ್ಲೂಕಿನಲ್ಲಿ ಕನಿಷ್ಟ ರಿಪೇರಿ ಕೆಲಸಕ್ಕೆ ಖರ್ಚುಮಾಡುವುದಾದರೆ ೫ ರಿಂದ ೧೦ ಲಕ್ಷ ರೂಪಾಯಿವರೆಗೆ ಆಗುತ್ತದೆ. ಇಂಥಾದ್ದು ರಾಜ್ಯದಲ್ಲಿ ಎಲ್ಲಾ ತಾಲ್ಲೂಕುಗಳಿಗೆ ಖರ್ಚು ಮಾಡಬೇಕಾದ ಪಕ್ಷದಲ್ಲಿ ಸುಮಾರು ೧೦—೧೫ ಕೋಟಿ ಹಣ ಬೇಕಾಗುತ್ತದೆ. ಈ ರಿಪೇರಿಗಾಗಿ ೧೦—೧೫ ಕೋಟಿ ಹಣ ಬೇಕಾದ ಪಕ್ಷದಲ್ಲಿ ಇನ್ನು ಒರಿಜಿನಲ್ ವರ್ಕ್ಸ್‌ಗೆ ಕನಿಷ್ಟ ೨೦ ಕೋಟಿ ಹಣವಾದರೂ ಬೇಕಾಗುತ್ತದೆ. ಏಕೆಂದರೆ, ದೇಶದ ಸಂಪತ್ತು ನೀರು. ನೀರು ಹರಿದು ಹೋಗಿ ಸಮುದ್ರಕ್ಕೆ ಸೇರುವುದಿಲ್ಲ, ಇಂಗಿ ಹೋಗುತ್ತದೆ. ಆದುದರಿಂದ ಅಲ್ಲಲ್ಲಿ ಪಿಕಪ್‌ಗಳನ್ನು ಮಾಡಿ ಮೈನರ್ ಇರಿಗೇಷನ್ ಕೆಲಸಗಳನ್ನು ಮಾಡಿದ ಪಕ್ಷದಲ್ಲಿ ಒಂದು ಬೆಳೆಯನ್ನು ಸಂಪೂರ್ಣವಾಗಿ ಪಡೆದು ಎರಡನೇ ಬೆಳೆಯನ್ನು ಕೂಡ ಬೆಳೆಯಬಹುದಾಗಿದೆ. ಮಲೆನಾಡಿನಲ್ಲಿ ಎರಡನೇ ಬೆಳೆಯನ್ನು ನೀರಾವರಿ ಕಾಮಗಾರಿಯಿಂದ ಬೆಳೆಯುತ್ತಿದ್ದಾರೆ. ಒಂದು ಕೆರೆಯನ್ನು ಹೊಸದಾಗಿ ಮಾಡಿಸಬೇಕಾದರೆ ೩–೪ ಲಕ್ಷ ರೂಪಾಯಿ ಆಗುತ್ತದೆ. ಒಂದು ಕೆರೆಗೆ ೩–೪ ಲಕ್ಷ ರೂಪಾಯಿ ಆದರೆ ನೂರಾರು ತಾಲ್ಲೂಕು ಕೆರೆಗಳಿಗೆ ಖರ್ಚುಮಾಡಬೇಕಾದರೆ ಕೋಟ್ಯಾಂತರ ರೂಪಾಯಿ ಆಗುತ್ತದೆ. ಈ ಸಾಲಿನಲ್ಲಿ ನೀರಾವರಿ ಕಾಮಗಾರಿಗೆ ಏನು ಹಣ ಪ್ರೊವೈಡ್ ಮಾಡಿದ್ದೀರಿ ಅದು ಏನೇನೂ ಸಾಕಾಗುವುದಿಲ್ಲ. ಅದಕ್ಕೆ ಒದಗಿಸಿರತಕ್ಕ ಹಣವನ್ನು ಕಾಮಗಾರಿಗಾಗಿಯೇ ಮೀಸಲಿಡಬೇಕು ಮತ್ತು ನೀರಾವರಿ ಕಾಮಗಾರಿಗಳಿಗಾಗಿ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹಣವನ್ನು ಒದಗಿಸಬೇಕು ಎಂದು ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ ಅವರನ್ನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಏಕೆಂದರೆ ದೇಶದ ಸಂಪತ್ತನ್ನು ಮತ್ತು ಉತ್ಪಾದನೆಯನ್ನು ಹೆಚ್ಚಿಸಬೇಕಾದರೆ ನೀರಾವರಿಗೆ ಹಣವನ್ನು ಖರ್ಚುಮಾಡಬೇಕು. ದೇಶದ ಸಂಪತ್ತು ಅಪ್ರತ್ಯಕ್ಷವಾಗಿ ಆಹಾರ. ಆಹಾರವನ್ನು ಹೆಚ್ಚುಮಾಡಬೇಕಾದರೆ ನೀರಾವರಿಗೆ ಹೆಚ್ಚು ಹಣವನ್ನು ಖರ್ಚುಮಾಡಬೇಕು. ನೀರಾವರಿ ಕೆಲಸಗಳಿಗೆ ನಾವು ಹಣವನ್ನು ಖರ್ಚುಮಾಡಿದ ಪಕ್ಷದಲ್ಲಿ ದೇಶದಲ್ಲಿ ಇರತಕ್ಕ ಆಹಾರ ಅಭಾವವನ್ನು ನೀಗುವುದಕ್ಕೆ ಮತ್ತು ಆಹಾರವನ್ನು ಹೆಚ್ಚಿಸುವುದಕ್ಕೆ ಅನುಕೂಲವಾಗುತ್ತದೆ ಹಾಗೂ ದೇಶದ ಸಂಪತ್ತು ಕೂಡ ಹೆಚ್ಚುತ್ತದೆ. ಮಲೆನಾಡಿನಲ್ಲಿ ಅನೇಕ ಕಾಮಗಾರಿಗಳನ್ನು ಕೈಗೊಳ್ಳಬೇಕಾದ್ದು ಅವಶ್ಯಕ ಇದೆ. ಈಗ ನನ್ನ ಕ್ಷೇತ್ರವಾದ ಮೂಡಿಗೆರೆ ಬಗ್ಗೆ ಹೇಳುವುದಾದರೆ, ನಾನೇ ಸುಮಾರು ೧೦—೨೦ ಲಕ್ಷದಷ್ಟು ಅಂದಾಜುಗಳ ಕಾಮಗಾರಿಗಳ ಪಟ್ಟಿಯನ್ನು ಕೊಟ್ಟಿದ್ದೇನೆ. ಅದರಲ್ಲಿ ಇನ್ನು ಒಂದು ವರ್ಷದಲ್ಲಿ ಪ್ರಾರಂಭ ಮಾಡಬೇಕಾದರೂ ಕೂಡ ನಾಲ್ಕಾರು ಲಕ್ಷ ಆಗುತ್ತದೆ, ರಿಪೇರಿಗಳಿಗೆ ೨—೩ ಲಕ್ಷ ವರ್ಷಕ್ಕೆ ಆಗುತ್ತದೆ. ಆದುದರಿಂದ ನಮ್ಮ ಮಂತ್ರಿಗಳು ಮತ್ತು ಸರ್ಕಾರದವರು ಇದರ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡಿ, ಪ್ರತಿ ತಾಲ್ಲೂಕಿನಿಂದ ಪಟ್ಟಿಯನ್ನು ತರಿಸಿಕೊಂಡು ನೋಡಬೇಕು. ಒಂದೊಂದು ತಾಲ್ಲೂಕಿಗೆ ಎಷ್ಟೆಷ್ಟು ಕಾಮಗಾರಿಗಳು ಬೇಕಾಗುತ್ತದೆ, ಸಣ್ಣ ಸಣ್ಣ ಪಿಕಪ್‌ಗಳು ಕೆರೆ ರಿಪೇರಿ, ಕೋಡಿ ಎತ್ತರಿಸುವುದು ಮೊದಲಾದ ಕಾಮಗಾರಿಗಳಿಗೆ ಎಷ್ಟು ಹಣ ಬೇಕಾಗುತ್ತದೆ ಎಂದು ಒಂದು ಪಟ್ಟಿಯನ್ನು ಸರ್ಕಾರದವರು ತಯಾರಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಬಜೆಟ್‌ನಲ್ಲಿ ಮೀಸಲಾಗಿಟ್ಟಿರತಕ್ಕ ಕಾಮಗಾರಿಗಳಿಗೆ ಈಗ ಟೆಂಡರ್ ಕಾಲ್‌ಫಾರ್ ಮಾಡಿದ್ದಾರೆ, ಅದರಲ್ಲಿ ಲೋಪದೋಷಗಳಿವೆ ಎಂದು ಅದನ್ನು ಶಿವಮೊಗ್ಗ ಸೂಪರಿಂಟೆಂಡಿಂಗ್ ಇಂಜಿನಿಯರವರು ಚೀಫ್ ಇಂಜಿನಿಯರ್‌ರವರಿಗೆ ಕಳುಹಿಸಿದ್ದಾರೆ, ಅದು ಇನ್ನೂ ಮಂಜೂರಾಗಿಲ್ಲ. ಕಾಲವಿಳಂಬವಾಗುತ್ತಿದೆ, ಒಂದೊಂದು ಕೆಲಸಕ್ಕೆ ಇಷ್ಟು ಕಾಲವಾದರೆ ನೂರಾರು ಕೆಲಸಗಳನ್ನು ಒಂದೊಂದು ಡಿವಿಜನ್‌ನಲ್ಲಿ ತೆಗೆದುಕೊಳ್ಳಬೇಕಾದರೆ ಎಷ್ಟು ಕಾಲ ಬೇಕಾಗುತ್ತದೆ. ಇದನ್ನು ಸರಿಯಾಗಿ ಮಾಡುತ್ತೀರಾ ಎಂದು ಕೇಳುತ್ತೇನೆ. ಇನ್ನೂ ಅನೇಕ ಸಣ್ಣನೀರಾವರಿ ಯೋಜನೆಗಳ ಪಟ್ಟಿಯನ್ನು ಕೊಟ್ಟಿದ್ದೇನೆ. ಅದರಲ್ಲೂ ನಮ್ಮ ಕ್ಷೇತ್ರದಲ್ಲಿ ಚಿಕ್ಕಮಗಳೂರು ತಾಲ್ಲೂಕಿನ ಆಲ್ದೂರು ಹೋಬಳಿ ಚಿಕ್ಕಮಾಗರವಳ್ಳಿ ಪಿಕಪ್‌ಗೆ ಸಂಬಂಧಪಟ್ಟ ಹಾಗೆ ಒಂದು ಎಸ್ಟಿಮೇಟ್ ಬಂದಿದೆ. ಅದು ಇನ್ನೂ ಮಂಜೂರಾಗಿಲ್ಲ. ಹೀಗೆ ಇನ್ನೂ ಅನೇಕ ಅಂದಾಜುಗಳನ್ನು ಕೊಟ್ಟಿದ್ದರೂ ಸಹ ಇನ್‌ವೆಸ್ಟಿಗೇಷನ್ ಮಾಡುವುದರಲ್ಲಿ ಕಾಲವಿಳಂಬವಾಗುತ್ತಿದೆ. ಈ ಇಲಾಖೆ ಸರಿಯಾದ ರೀತಿಯಲ್ಲಿ ಕೆಲಸಮಾಡಬೇಕು. ಈ ಇಲಾಖೆ ಸರಿಯಾದ ರೀತಿಯಲ್ಲಿ ಕೆಲಸಮಾಡಿದ ಪಕ್ಷದಲ್ಲಿ ದೇಶದ ವರಮಾನ ಹೆಚ್ಚುತ್ತದೆ, ಭತ್ತ, ರಾಗಿ ಮೊದಲಾದ ಬೆಳೆ ಜಾಸ್ತಿಯಾಗುತ್ತದೆ ಇದರಿಂದ ಆಹಾರದ ಅಭಾವ ಕಡಿಮೆಯಾಗುತ್ತದೆ ಸರ್ಕಾರಿ ನೌಕರರು ನಮಗೆ ತುಟ್ಟಿಭತ್ಯ ಹೆಚ್ಚಿಸಬೇಕು ಎಂದು ಆಹಾರದ ಅಭಾವದಿಂದ, ಮತ್ತು ಆಹಾರ ಪದಾರ್ಥಗಳ ಬೆಲೆ ಜಾಸ್ತಿಯಾದುದರಿಂದ ಕೇಳುತ್ತಾರೆಯೇ ಹೊರತು, ತುಟ್ಟಿಭತ್ಯ ಜಾಸ್ತಿಮಾಡಬೇಕು ಎಂದು ಸುಮ್ಮನೆ ಕೇಳುವುದಿಲ್ಲ. ಆಹಾರ ಅಭಾವ ಒಂದೇ ಎಲ್ಲಾ ಕೆಲಸಗಳಿಗೂ ಮೂಲಕಾರಣವಾಗಿರುವುದರಿಂದ, ಆಹಾರದ ಅಭಾವವನ್ನು ನೀಗುವುದಕ್ಕೋಸ್ಕರ ಸಣ್ಣ ನೀರಾವರಿ ಕಾಮಗಾರಿಗಳಿಗೆ ಎಷ್ಟು ಹಣವನ್ನು ಖರ್ಚುಮಾಡಿದರೂ ತೀರದು. ಕೆಲವು ಪ್ರದೇಶಗಳಲ್ಲಿ ಭಾರಿ ನೀರಾವರಿ ಯೋಜನೆಗಳಿಲ್ಲ. ಒಂದೊಂದು ಕಡೆ ದೊಡ್ಡ ನೀರಾವರಿ ಯೋಜನೆಗೆ ಕೋಟಿಗಟ್ಟಲೆ ಹಣವನ್ನು ಖರ್ಚುಮಾಡುತ್ತೀರಿ.

ಕೋಟಿಗಟ್ಟಲೆ ಹಣವನ್ನು ಖರ್ಚುಮಾಡಿದರೂ ೧೦ ವರ್ಷವಾದರೂ ಫಲ ಕೊಡುವುದಿಲ್ಲ, ನಿರೀಕ್ಷಿಸಿದಷ್ಟು ಜಾಗ್ರತೆಯಾಗಿ ವರಮಾನ, ಉತ್ಪತ್ತಿ ಆಗುವುದು ಕಷ್ಟ. ಆದುದರಿಂದ ಆಶ್ಯೂರ್ಡ್ ಇನ್‌ಕಂ, ಬೆಳೆ ಬರತಕ್ಕ ಸಣ್ಣ ನೀರಾವರಿ ಕಾಮಗಾರಿಗಳಿಗೆ ಕೆಲಸಗಳಿಗೆ ಹೆಚ್ಚು ಹಣವನ್ನು, ಬಂಡವಾಳವನ್ನು ಹಾಕುವುದರಲ್ಲಿ ನಷ್ಟವಾಗುವುದಿಲ್ಲ. ಬಜೆಟ್‌ನಲ್ಲಿ ರಾಜ್ಯಕ್ಕೆ ಪ್ರೊವೈಡ್ ಮಾಡಿರತಕ್ಕ ೮—೯ ಕೋಟಿ ರೂಪಾಯಿಗಳು ಸಾಕಾಗುತ್ತವೆ ಎಂದು ಮಂತ್ರಿಗಳು ಹೇಳಬಹುದು. ಆದರೆ ಅದು ಮಲೆನಾಡಿಗೇ ಏನೇನು ಸಾಕಾಗುವುದಿಲ್ಲ. ಪಿಕಪ್‌ಗಳು ಸಣ್ಣ ಸಣ್ಣ ಕೆರೆ, ಕೋಡಿ ರಿಪೇರಿ ಮೊದಲಾದ ಕೆಲಸಗಳಿಗೆ ಈ ಹಣ ಏನೇನೂ ಸಾಕಾಗುವುದಿಲ್ಲ. ಮಳೆ ಹೆಚ್ಚಾಗಿ ಬಂದರೆ ಬಂಡ್ ಕೊಚ್ಚಿಕೊಂಡು ಹೋಗುತ್ತದೆ, ಒಡ್ಡು, ನಾಲೆ ಕೊಚ್ಚಿಕೊಂಡು ಹೋಗುತ್ತದೆ ಒಂದೊಂದು ನಾಲೆಗೆ ೫೦,೦೦೦ ಎಸ್ಟಿಮೇಟ್ ಆಗಿದೆ, ಅದು ಇನ್ನೂ ಮಂಜೂರಾಗಿಲ್ಲ. ಒಂದೊಂದು ನಾಲೆ ನಿರ್ಮಾಣವಾಗಬೇಕಾದರೆ ೫೦,೦೦೦ ರೂಪಾಯಿ ಬೇಕಾಗುತ್ತದೆ. ನಮ್ಮ ರಾಜ್ಯದಾದ್ಯಂತ ಇರುವ ಎಲ್ಲಾ ಮೈನರ್ ಇರಿಗೇಷನ್ ಕಾಮಗಾರಿಗಳನ್ನು ಕೈಗೊಳ್ಳಬೇಕಾದರೆ ಎಷ್ಟು ಹಣ ಬೇಕು, ಎನ್ನುವುದರ ಬಗ್ಗೆ ಲಿಸ್ಟನ್ನು ತರಿಸಿಕೊಂಡು ಮಾನ್ಯ ಸಣ್ಣ ನೀರಾವರಿ ಕಾಮಗಾರಿ ಮಂತ್ರಿಗಳು ಈ ಕಾರ್ಯಕ್ಕೆ ಹೆಚ್ಚು ಹಣವನ್ನು ಈ ವರ್ಷದ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಪ್ರೊವೈಡ್‌ಮಾಡಿಸಿ, ಸಣ್ಣನೀರಾವರಿ ಕಾರ್ಯಗಳನ್ನು ಅಭಿವೃದ್ಧಿ ಮಾಡಿಸಬೇಕು ಎಂದು ನಾನು ಕೇಳಿಕೊಂಡು ಈ ನಿರ್ಣಯವನ್ನು ಸಂತೋಷದಿಂದ ಮಂಡಿಸುತ್ತೇನೆ.

5-30 P.M.

† ಶ್ರೀ ಕೆ. ಪ್ರಭಾಕರ್ (ವರ್ತೂರು).— ಮಾನ್ಯ ಅಧ್ಯಕ್ಷರೇ, ಮಾನ್ಯ ಪುಟ್ಟಸ್ವಾಮಿಯವರು ಸಭೆಯ ಮುಂದೆ ಮಂಡಿಸಿರತಕ್ಕ ಈ ಠರಾವಿನಲ್ಲಿ ಇರತಕ್ಕ ವಿಚಾರವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತಾ ಸರ್ಕಾರಕ್ಕೆ ಕೆಲವು ವಿಚಾರಗಳನ್ನು ಸೂಚಿಸಬೇಕೆಂದು ಬಯಸುತ್ತೇನೆ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳು, ಪ್ರಾಜೆಕ್ಟ್‌ಗಳು ದೇಶಕ್ಕೆ ಬೇಸಾಯ ದೃಷ್ಟಿಯಿಂದ ಮತ್ತು ಎಲೆಕ್ಟ್ರಿಸಿಟಿಯನ್ನು ಉತ್ಪಾದನೆ ಮಾಡುವುದಕ್ಕೆ ಬೇಕು ಎನ್ನುವ ತತ್ವವನ್ನು ಒಪ್ಪತಕ್ಕದ್ದಾಗಿದೆ. ಆದರೆ ದೇಶದಲ್ಲಿ ಆನೆ ಏನು ಕೆಲಸ ಮಾಡುತ್ತದೆ, ಉಳುವ ಎತ್ತು ಏನು ಕೆಲಸ ಮಾಡುತ್ತದೆ ಎಂದು ಹೋಲಿಸಿದರೆ ಆನೆ ಹೆಚ್ಚು ಉಪಯುಕ್ತವಾದ, ಶಕ್ತಿಯುತವಾದ ಪ್ರಾಣಿ. ಅದನ್ನು ಶಕ್ತಿಯಿಂದ ಸಾಧು ಮಾಡತಕ್ಕಂಥದ್ದು ಅಷ್ಟೇ ಕಷ್ಟವಾದುದು. ಈ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟುವುದರಿಂದ ನೇರವಾಗಿ ಯಾರಿಗೆ ಉಪಕಾರವಾಗುತ್ತದೆ ಎಂದರೆ ಹೆಚ್ಚು ಜಮೀನು ಇರತಕ್ಕ ದೊಡ್ಡ ದೊಡ್ಡ ರೈತರುಗಳಿಗೆ ಉಪಯೋಗವಾಗುತ್ತದೆ ಎನ್ನುವುದನ್ನು ನಾವು ಒಪ್ಪಿಕೊಳ್ಳಬೇಕು. ದೇಶಾದ್ಯಂತ ನೀರಾವರಿಗೆ ಅನ್ವಯವಾಗತಕ್ಕಂಥ ಚಿಕ್ಕ ಚಿಕ್ಕ ಕೆರೆಗಳನ್ನು ಕಟ್ಟುವುದಕ್ಕೆ ಮತ್ತು ಒಡ್ಡುಗಳನ್ನು ಹಾಕುವುದಕ್ಕೆ ಒದಗಿಸತಕ್ಕಂಥ ಹಣ ಸಾಲದು. We must make use of every drop of water ಎಂದು ಪಿ.ಡಬ್ಲ್ಯು.ಡಿ. ಮಂತ್ರಿಗಳು ಪದೇ ಪದೇ ಹೇಳುತ್ತಾರೆ. ಆದರೆ ಒಂದು ಚಿಕ್ಕ ತಾಲ್ಲೂಕನ್ನು ತೆಗೆದುಕೊಂಡರೆ ಕೆರೆಗಳ ರಿಪೇರಿ ಆಗಲೀ ಮತ್ತು ಚಿಕ್ಕ ಚಿಕ್ಕ ಕಾಮಗಾರಿಗಳನ್ನು ಮಾಡತಕ್ಕಂಥ ರೀತಿಯೇ ಆಗಲೀ ಸಮರ್ಪಕವಾಗಿ ಇಲ್ಲ. ೧೦ ಎಕರೆ ಕಡಿಮೆ ಅಚ್ಚುಕಟ್ಟು ಇರತಕ್ಕ ಕಾಮಗಾರಿಗಳನ್ನು ತಾಲ್ಲೂಕು ಬೋರ್ಡ್‌ನವರು ಮಾಡಲಿ ಎಂದು ಹೇಳುವ ತತ್ವವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಇದು ಒಂದು ರೂಪದಲ್ಲಿ ದೇಶಕ್ಕೆ ಒಳ್ಳೆಯದು ಅಲ್ಲ ಎಂದು ನನ್ನ ಭಾವನೆ. ತಾಲ್ಲೂಕು ಅಭಿವೃದ್ಧಿ ಮಂಡಲಿಯವರಿಗೆ ಈ ಬಾಬಿಗೆ ಸಾಕಷ್ಟು ಹಣವನ್ನು ಕೊಡುವುದಿಲ್ಲ. ಚಿಕ್ಕ ಚಿಕ್ಕ ಕೆರೆ ಕಾಮಗಾರಿಗಳನ್ನು ಮಾಡತಕ್ಕದ್ದು ತಾಲ್ಲೂಕು ಬೋರ್ಡಿನವರ ಕಾರ್ಯವಾಗಿದೆ. ಟೆಕ್ನಿಕಲ್ ಹ್ಯಾಂಡ್ಸ್ ಸಮರ್ಪಕವಾಗಿ ಕೆಲಸಮಾಡುವುದಿಲ್ಲ. ಅವರಿಗೆ ಹಣ ಸಾಲುವುದಿಲ್ಲ ಚಿಕ್ಕ ಚಿಕ್ಕ ರೈತರು ಅಭಿವೃದ್ಧಿಗೆಂದು ಮೇಜರ್ ಇರಿಗೇಷನ್‌ಗೆ ಏನು ಹಣ ಇಡುತ್ತೀರೋ ಆ ಒಂದು ಪ್ರಪೋರ್ಷನ್ ಅಂದರೆ ಚಿಕ್ಕ ಕಾಮಗಾರಿಗಳಿಗೆ ಇಡತಕ್ಕ ಹಣ ಸುತರಾಮ್ ಸಾಲದು ಎನ್ನುವ ದೃಷ್ಟಿಯಿಂದ ಜಿಲ್ಲಾ ಮಟ್ಟದಲ್ಲಾಗಲೀ ತಾಲ್ಲೂಕು ಮಟ್ಟದಲ್ಲಾಗಲೀ ಸಣ್ಣ ಕಾಮಗಾರಿಗಳ ಯೋಜನೆಗಳನ್ನು ವ್ಯವಸ್ಥಿತವಾಗಿ ಹಾಕಿಕೊಂಡು ಕೆಲಸಮಾಡಬೇಕು. ಹಿಸ್ಟರಿ ಆಫ್ ಟಾರ್ಕ್ಸ್ ಎಂದು ಮಾಡಿಕೊಂಡಿರಬೇಕು. ಯಾವ ಕಾಲಕ್ಕೆ ಏನು ತೊಂದರೆ ಬರುತ್ತದೆ, ಏನು ರಿಪೇರಿ ಮಾಡುತ್ತಾರೆ, ಒಂದು ವರ್ಷದಲ್ಲಿ ಮಾಡಿಬಿಡುತ್ತೇವೆ ಎನ್ನುವ ರೂಪದಲ್ಲಿ ಉತ್ತರವನ್ನು ಕೊಡುತ್ತಾರೆ. ಅದು ಕೇಳುವುದಕ್ಕೆ ಚೆನ್ನಾಗಿ ಇರುತ್ತದೆ. ವಾಸ್ತವವಾಗಿ ನೋಡಿದರೆ ಚಿಕ್ಕ ಚಿಕ್ಕ ಕೆರೆಗಳ ಒಂದು ರಚನೆಯಾಗಲೀ, ಅಥವಾ ಚಿಕ್ಕ ಪುಟ್ಟ ಕಾಮಗಾರಿಗಳಿಗೆ ಆಗಿರತಕ್ಕ ರಿಪೇರಿ ಕೆಲಸಗಳೇ ಆಗಲೀ ವರ್ಷಗಟ್ಟಲೆ ಮಾಡುವುದಿಲ್ಲ. ಇದರಿಂದ ಚಿಕ್ಕ ಚಿಕ್ಕ ರೈತರಿಗೆ ಅನಾನುಕೂಲವಾಗಿದೆ ಎಂದು ನಾನು ಭಾವಿಸುತ್ತೇನೆ. ಈಗ ಕೋಟ್ಯಾಂತರ ಎಕರೆಗಳಷ್ಟು ಜಮೀನು ಇದ್ದು ಹೆಚ್ಚು ಆಹಾರೋತ್ಪನ್ನ ಒಂದೇ ಕಡೆ ಆಗುವ ಬದಲು ಹತ್ತಾರು ಕಡೆಯಾದರೂ ಸುಲಭ ಬೆಳೆಯನ್ನು ಮಾಡತಕ್ಕದ್ದು ಮೆಚ್ಚತಕ್ಕ ವಿಚಾರ. ಸಣ್ಣಪುಟ್ಟ ಕಾಮಗಾರಿಗಳ ದೃಷ್ಟಿಯಿಂದ ಜಿಲ್ಲಾಮಟ್ಟದಲ್ಲಿ ಹಣ ಒದಗಿಸತಕ್ಕ ರೀತಿಯಿಂದ ಈಗಿನ ವ್ಯವಸ್ಥೆಯನ್ನು ಬದಲಾವಣೆ ಮಾಡಿಕೊಂಡು ಹೆಚ್ಚಿನ ಅಭಿವೃದಿ

ಆಗುವ ರೀತಿಯಲ್ಲಿ ಸರ್ಕಾರದವರು ವ್ಯವಸ್ಥಿತವಾದ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡಿಕೊಡಬೇಕು ಎಂದು ನನ್ನ ಭಾವನೆ. ಚಿಕ್ಕ ಪುಟ್ಟ ರೈತರ ದೃಷ್ಟಿಯಿಂದ ಎಷ್ಟು ಯೋಜನೆಗಳನ್ನು ಹಾಕಿದರೂ ಅವರು ಮುಂದುವರಿಯುವುದಕ್ಕೆ ಆಸ್ಪದ ಇಲ್ಲದ ರೀತಿಯಲ್ಲಿ ಕಾಮಗಾರಿಗಳ ಕೆಲಸ ನಡೆಯುತ್ತಿದೆ. ಚಿಕ್ಕಪುಟ್ಟ ಕೆರೆಗಳನ್ನು ಇಟ್ಟುಕೊಂಡು ರಿಪೇರಿ ಮಾಡತಕ್ಕದ್ದನ್ನು ವರ್ಷೇ ವರ್ಷೇ ಮಾಡಿಕೊಡುತ್ತೇವೆಂದು ಸರ್ಕಾರದವರು ಹೇಳುತ್ತಾರೆ. ಅದು ಇಲ್ಲ ಎಂದು ನನ್ನ ಭಾವನೆ. ಎಷ್ಟು ದುಡ್ಡು ಇದೆಯೋ ಅಷ್ಟು ಮಾತ್ರ ಮಾಡುತ್ತೇವೆ ಎಂದು ಹೇಳುತ್ತಾರೆ ಎಲ್ಲಾ ಚಿಕ್ಕಪುಟ್ಟ ಕಾಮಗಾರಿಗಳನ್ನು ಸಮರ್ಪಕವಾಗಿ ಮಾಡುತ್ತೇವೆ ಎನ್ನುವ ಉತ್ತರವನ್ನು ಕೊಡಲಾರರು ಎಂದು ನನ್ನ ಭಾವನೆ. ಆ ದೃಷ್ಟಿಯಿಂದ ಜಿಲ್ಲಾಮಟ್ಟದಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ೧೦ ಕೋಟಿ ರೂಪಾಯಿಗಳನ್ನು ಒದಗಿಸಿ ಸರ್ಕಾರದವರು ಕೆಲಸಗಳನ್ನು ಕ್ರಮಬದ್ಧವಾಗಿ ಮಾಡಬೇಕು. ಈ ಬಗ್ಗೆ ಖಚಿತವಾದ ನಿರ್ಧಾರವನ್ನು ಸರ್ಕಾರದವರು ತಾಳಬೇಕು.

(ಮಾನ್ಯ ಜಿ. ಪುಟ್ಟಸ್ವಾಮಿಯವರು ಕುರ್ಚಿಯಲ್ಲಿ ಉಪಸ್ಥಿತರಿದ್ದರು)

ದೊಡ್ಡ ಕಾಮಗಾರಿಗಳು ಆಗುವವರೆಗೆ ಸಣ್ಣ ಕಾಮಗಾರಿಗಳನ್ನು ನಿಲ್ಲಿಸಿದ್ದಾರೆ ಅನ್ನಿಸುವುದಿಲ್ಲ. ಸಣ್ಣ ಕಾಮಗಾರಿಗಳನ್ನು ಮುಗಿಸಿ ದೊಡ್ಡ ದೊಡ್ಡ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತಾರೆ ಎಂದು ಅನ್ನಿಸುವುದಿಲ್ಲ. ಯಾವುದೋ ಸಮರ್ಪಕವಾಗಿಲ್ಲದ ರೂಪದಲ್ಲಿ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆಂದು ತಿಳಿದುಕೊಳ್ಳಬಹುದು. ಪಿ ಡಬ್ಲ್ಯು ಡಿ ಮಂತ್ರಿಗಳು ಇದ್ದುದರಲ್ಲಿ ಬುದ್ಧಿವಂತರು. ಅವರನ್ನು ಏನಾದರೂ ಅಲ್ಲಿ ಸೇತುವೆ ಬೇಕು, ಇಲ್ಲಿ ಸೇತುವೆ ಬೇಕು ಎಂದು ಕೇಳಿದರೆ ಅದನ್ನು ಕಾರ್ಪೊರೇಷನ್‌ನವರು ಮಾಡುತ್ತಾರೆ, ಇಷ್ಟು ವರ್ಷಗಳಲ್ಲಿ ಮುಗಿಯುತ್ತದೆ, ೬೬ ಕೋಟಿ ರೂಪಾಯಿ ಅದಕ್ಕೆ ಕೆಲಸಗಳನ್ನು ಮಾಡಿಬಿಡಬಹುದು ಎಂದು ಖಚಿತವಾದ ತೀರ್ಮಾನವನ್ನು ಹಾಕಿಕೊಂಡು ಕೆಲಸಮಾಡುತ್ತಾರೆ. ಸಣ್ಣ ನೀರಾವರಿ ಕೆಲಸಗಳನ್ನು ಜಿಲ್ಲಾ ಮಟ್ಟದಲ್ಲಿ ಇರತಕ್ಕ ಕಾಮಗಾರಿಗಳು, ಪ್ರತಿ ಜಿಲ್ಲೆಯಲ್ಲಿ ಇರತಕ್ಕ ಕಾಮಗಾರಿಗಳು ಹೆಚ್ಚು ಕಡಿಮೆ ಇದೆ ಎನ್ನುವುದನ್ನು ಸರಿಗೊಳಿಸುವ ದೃಷ್ಟಿಯಿಂದ ವ್ಯವಸ್ಥಿತವಾಗಿ ಕಾರ್ಯಗಳನ್ನು ಮಾಡತಕ್ಕದ್ದು ಸರಿ ಎಂದು ಹೇಳುತ್ತೇನೆ. ಚಿಕ್ಕಪುಟ್ಟ ಕಾಮಗಾರಿಗಳನ್ನು ಇರಿಗೇಷನ್‌ಗೆ ಸಂಬಂಧಪಟ್ಟಹಾಗೆ ತಾಲ್ಲೂಕು ಬೋರ್ಡ್‌ಗೆ ೧೦ ಎಕರೆ ಕಡಿಮೆ ಇರುವುದನ್ನು ಕೊಟ್ಟಿದ್ದಾರೆ. ಅದಕ್ಕೆ ಸಾಕಷ್ಟು ಹಣ ಇಲ್ಲದೆ ಇರುವ ದೆಶೆಯಿಂದ ಯಾವ ಕಾರ್ಯವೂ ಆಗುವುದಿಲ್ಲ. ಹಣ ಕೊಟ್ಟರೆ ಹೆಚ್ಚು ಕಡಿಮೆ ಮಾರ್ಚಿ ತಿಂಗಳಲ್ಲಿ ಕೊಡುತ್ತಾರೆ. ಈ ಹಣದಲ್ಲಿ ರಿಪೇರಿ ಮಾಡುವುದಕ್ಕೆ ಕೊಡುವುದು, ಇತರ ಖರ್ಚುಗಳನ್ನು ಮಾಡಿಬಿಡುವುದು ಈ ರೀತಿಯ ಗೊಂದಲಗಳು ಬರುತ್ತವೆ. ಹಣ ಖರ್ಚಾದ ದಾಖಲೆಗಳು ಇದೆಯೇ ವಿನಹ ದೇಶದಲ್ಲಿ ಉತ್ಪನ್ನವಾಗುವ ದಾಖಲೆಗಳು ಆಗುವುದಿಲ್ಲ. ಸಣ್ಣ ನೀರಾವರಿಗೆ ಸಂಬಂಧಪಟ್ಟ ಕಾಮಗಾರಿಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ಸರ್ಕಾರದವರು ಮಾಡಬೇಕು. ಈಗ ಇರುವ ರೀತಿಯಲ್ಲಿ ಅದನ್ನು ಮುಂದುವರಿಸಿಕೊಂಡು ಬಂದರೆ ಅದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಈ ಠರಾವಿನಲ್ಲಿ ಇರತಕ್ಕ ಮೂಲಭೂತ ತತ್ವವನ್ನು ಈ ಸಭೆಯ ಮುಖಾಂತರ ಸರಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ಮಾನ್ಯ ಅಧ್ಯಕ್ಷರೇ, ಈ ಸಣ್ಣ ನೀರಾವರಿಯ ಬಗ್ಗೆ ಸುಮಾರು ೧೦ ಕೋಟಿ ರೂಪಾಯಿಯನ್ನು ಒದಗಿಸುವುದರ ಬಗ್ಗೆ ತಂದಿರತಕ್ಕ ನಿರ್ಣಯವನ್ನು ನಾನು ಬೆಂಬಲಿಸುತ್ತೇನೆ. ಅಷ್ಟೇ ಅಲ್ಲ ಈ ನಿರ್ಣಯದಲ್ಲಿ ಕೇಳಿರತಕ್ಕ ೧೦ ಕೋಟಿ ರೂಪಾಯಿಗಳು ಏತಕ್ಕೂ ಸಾಲದು. ರಾಜ್ಯದ ವಿಸ್ತರಣೆ ಮಾಡತಕ್ಕ, ಗಳಿಸಿದ ಪ್ರಮಾಣವನ್ನು ಗಮನದಲ್ಲಿ ಇಟ್ಟುಕೊಂಡರೆ ಪ್ರತಿ ವರ್ಷ ಸಣ್ಣ ನೀರಾವರಿಯ ಬಗ್ಗೆ ೨೫ ರಿಂದ ೩೦ ಕೋಟಿ ರೂ. ಆದರೂ ನಾವು ಖರ್ಚು ಮಾಡಬೇಕಾದ ಅಗತ್ಯ ಕರ್ನಾಟಕ ರಾಜ್ಯದಲ್ಲಿ ಇದೆ. ನಾವು ನೀರಾವರಿಯ ಬಗ್ಗೆ ಹೆಚ್ಚು ಹಣವನ್ನು ತೊಡಗಿಸುವುದು, ದೊಡ್ಡ ಪ್ರಮಾಣದಲ್ಲಿ ಮತ್ತು ಮಧ್ಯಮ ಪ್ರಮಾಣದಲ್ಲಿ ನೀರಾವರಿ ಕ್ಷೇತ್ರದಲ್ಲಿ ಮಾತ್ರ. ಅನೇಕ ಸದಸ್ಯರು ಇದೇ ಸದನದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಶಾಸಕರಾದಂಥ ಶ್ರೀಮಾನ್ ಆರ್ಮುಗಂರವರು ಒಂದು ಸಾರಿ ಕಠೋರವಾಗಿ ಹೇಳಿದರು. ದೊಡ್ಡ ಪ್ರಮಾಣದಲ್ಲಿ ಮೇಜರ್ ಇರಿಗೇಷನ್ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಪ್ರದೇಶಗಳು ಎಲ್ಲೆಲ್ಲಿ ಆಗಿದೆಯೋ ಅಲ್ಲಲ್ಲಿ ಹೆಚ್ಚು ಕಡಿಮೆ ದೊಡ್ಡವರನ್ನು ದೊಡ್ಡವರನ್ನಾಗಿ ಮಾಡುವ ಕೆಲಸ ನಡೆದಿದೆಯೇ ವಿನಹ ಸಣ್ಣವರಿಗೆ ಇದರಿಂದ ಏನೂ ಪ್ರಯೋಜನ ಆಗಿಲ್ಲ ಎನ್ನತಕ್ಕ ಮಾತನ್ನು ಹೇಳಿದರು. ಅವರು ಈ ಮಾತನ್ನು ಬಹಳ ದೀರ್ಘವಾಗಿ ಹೇಳಿದರು. ಹಾಗೆಯೇ ಬೇಜರು ಜಮೀನು ಇರತಕ್ಕ ಭೂಮಾಲೀಕರು ನೀರು ಬಂದಮೇಲೆ ಸಮಾಜವಾದ ಮೆಟ್ಟಿ ಜಮೀನು ಮಾಡಿಕೊಂಡಿದ್ದಾರೆ. ಅಲ್ಲಿ ಇರತಕ್ಕ ಬೇಸಾಯ ಕೂಲಿಗಾರರು ಭೂಮಿ ಇರತಕ್ಕವರು ಇದ್ದಾರೆ; ಆದರೆ ಕಸಬು ಮಾಡುವವರು ಹಜಾಮ, ಕಮ್ಮಾರ ಇಂತಹವರು ಇರುವ ಸ್ಥಿತಿಯಲ್ಲಿಯೇ ಉಳಿದಿದ್ದಾರೆ. ಆದುದರಿಂದ ದೊಡ್ಡ ಪ್ರಮಾಣದ ನೀರಾವರಿ ಹೆಚ್ಚಿದಂತೆ ಸಾಮಾಜಿಕವಾಗಿ ಮನುಷ್ಯ ವರ್ಗದಲ್ಲಿ ಅಂತರ ಇನ್ನೂ ಅಷ್ಟು ಎತ್ತರವಾಗಿ ಬೆಳೆದಿದೆ. ಸಮಾಜದಲ್ಲಿ ಸಮಾನತೆ ಇನ್ನೂ ಬಂದಿಲ್ಲ ಎಂದು

ಅವರು ಹೇಳಿದರು. ಇವತ್ತೂ ಕೂಡ ಕರ್ನಾಟಕ ರಾಜ್ಯದಲ್ಲಿ ಈ ದೊಡ್ಡ ಪ್ರಮಾಣದ ನೀರಾವರಿ ೫ ಜಿಲ್ಲೆಯಲ್ಲಿ ವಿಸ್ತಾರಗೊಂಡಿದೆ. ಐದು ಜಿಲ್ಲೆಗೆ ವಿಸ್ತಾರ ಗೊಂಡಿದ್ದರೂ ಕೂಡ, ಒಂದೊಂದು ಇಲ್ಲ, ಎಲ್ಲಾ ಭಾಗಕ್ಕೂ ಕೂಡ ಹಬ್ಬಿಲ್ಲ. ಶಿವಮೊಗ್ಗದಲ್ಲಿ ತುಂಗಾ ಭದ್ರಾ ಶಿವಮೊಗ್ಗದ ಕೆಲವು ಪ್ರದೇಶ ಚನ್ನಗಿರಿ ಹೊನ್ನಾಳಿಯಲ್ಲಿ ಇತರೆ ಕೆಲವು ಪ್ರದೇಶ ಆಗಬಹುದು. ಕೆಲವು ಜಿಲ್ಲೆಗಳಲ್ಲಿ ಪ್ರಮುಖವಾಗಿ ನೀರಾವರಿಯೋಜನೆ ಆದರೂ ಕೂಡ ಜಿಲ್ಲೆಗೆ ಶೇಕಡ ೧೦ ರಷ್ಟು ಭಾಗ ಭೂಮಿ ಇದ್ದು ನೀರಾವರಿ ಮಾಡಿಲ್ಲ. ಹಾಗೆ ಇವತ್ತು ತುಂಗಭದ್ರಾ ಯೋಜನೆ ತೆಗೆದುಕೊಂಡರೆ ಅಥವಾ ಕಾವೇರಿ ಬೇಸಿನ್‌ನಲ್ಲಿ ಬರತಕ್ಕ ಯೋಜನೆ ತೆಗೆದುಕೊಂಡರೆ ಎಲ್ಲವನ್ನೂ ತೆಗೆದುಕೊಂಡರೆ ಒಟ್ಟು ರಾಜ್ಯದ ನೀರಾವರಿ ಕ್ಷೇತ್ರ ಇದುವರೆಗೆ ಶೇಕಡ ೧೪ ರಷ್ಟು ಆಗಿದೆ. ದೊಡ್ಡ ಪ್ರಮಾಣದ ನೀರಾವರಿಯನ್ನು ಎಲ್ಲವನ್ನೂ ಕೂಡ ಬಳಸಿಕೊಂಡರೆ ನಮ್ಮ ನೀರಾವರಿ ಕ್ಷೇತ್ರ ೩೦ ರಿಂದ ೪೦ರ ವರೆಗೆ ಆಗಬಹುದು. ಈ ಬಗ್ಗೆ ನಿರೀಕ್ಷಣೆ ತಜ್ಞರು ಮಾಡಿದ್ದಾರೆ, ಆ ಮಟ್ಟಕ್ಕೆ ಹೋಗುವುದಕ್ಕೆ ಸಾಧ್ಯವಾಗಿಲ್ಲ. ಶೇಕಡ ೧೪ ರಷ್ಟು ಪ್ರಮಾಣದಲ್ಲಿ ಭೂಮಿ ಇದೆ. ಮಧ್ಯಮವರ್ಗದ ಹಾಗೂ ದೊಡ್ಡ ಪ್ರಮಾಣದ ನೀರಾವರಿ ಒದಗಿಸುವುದಕ್ಕೆ ಸುಮಾರು ಐದು ನೂರು ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಸದನದಲ್ಲಿ ಒಂದು ಮಾತನ್ನು ಹೇಳಿದರು, ಎಷ್ಟು ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಿದರೂ ಕೂಡ ಕರ್ನಾಟಕ ರಾಜ್ಯದಲ್ಲಿ ಅಸ್ಯೂರ್ ವಾಟರ್, ಆಶ್ರಿತವಾದ ನೀರಾವರಿ ಪ್ರದೇಶ ಮಾಡಿರತಕ್ಕದ್ದು ಶೇಕಡ ೧೪ ರಷ್ಟು ಮಾತ್ರ. ಉಳಿದಿರತಕ್ಕದ್ದು ೨.೨೫ ಲಕ್ಷ ಎಕರೆ ಸಾಗುವಳಿ ಭೂಮಿ ಇರತಕ್ಕದ್ದು. ೧೪ ರಷ್ಟು ಎಂದರೆ, ೨೮ ಲಕ್ಷ ಎಕರೆ ಭೂಮಿ ಹೊರತು ಅಗಾಧವಾದ ಪ್ರಮಾಣದಲ್ಲಿ ಬೇಸಾಯಕ್ಕೆ ನೀರನ್ನು ಕಾಣದೇ ಇದೆ ಎಂದು ಊಹಿಸಬಹುದು. ಆದುದರಿಂದ, ಬೇಸಾಯಗಾರರು ಹೆಚ್ಚು ಕಡಿಮೆ ಎಲ್ಲಾ ತಜ್ಞರ ಅಭಿಪ್ರಾಯ ಪಟ್ಟಿರತಕ್ಕದ್ದು ಸರ್ವರೂ ಒಪ್ಪಿರತಕ್ಕದು, ಯಾವ ಬೇಸಾಯ ಮಳೆಯನ್ನು ಆಶ್ರಯಿಸುತ್ತದೆ, ಅಂಥ ಬೇಸಾಯ ಉದ್ಧಾರವಾಗುವುದಿಲ್ಲ ಎಂದು ಒಪ್ಪಿರತಕ್ಕದ್ದು ಎಲ್ಲರಿಗೂ ಅನಿಸಿರತಕ್ಕದ್ದು ಇದು ಸತ್ಯವಾದ ಮಾತು. ಹೀಗಿರಬೇಕಾದರೆ, ಕರ್ನಾಟಕ ರಾಜ್ಯದಲ್ಲಿ ಎರಡು ಕೋಟಿ ೨೮ ಲಕ್ಷ ಎಕರೆ ವ್ಯವಸಾಯ ಭೂಮಿ ಇದ್ದರೂ ಕೂಡ ೨೮ ಲಕ್ಷ ಎಕರೆ ನೀರಾವರಿ ಆಗಿದೆ. ಉಳಿದಿದ್ದು ಮಳೆಯನ್ನು ಅನುಸರಿಸತಕ್ಕ ಭೂಮಿ ಇದೆ. ಇಷ್ಟು ವಿಸ್ತಾರವಾದ ಜನ ವ್ಯವಸಾಯದಲ್ಲಿ ತೊಡಗಿದ್ದರೂ ಕೂಡ ಬೇರೆಯವರಿಗೆ ಅನ್ನವನ್ನು ಒದಗಿಸುವುದಕ್ಕೆ ಸಾಧ್ಯವಾಗದಿದ್ದರೂ, ತನ್ನ ಅನ್ನವನ್ನು ಒದಗಿಸಿಕೊಳ್ಳಲಿಕ್ಕೆ ಇರುವ ಸ್ಥಿತಿ ಕರ್ನಾಟಕ ರಾಜ್ಯದಲ್ಲಿ ನೋಡುತ್ತೇವೆ. ಕಾರಣ ಏನು ಎಂದರೆ ಅವನಿಗೆ ಅಗತ್ಯವಾದ ನೀರನ್ನು ಒದಗಿಸುವುದಕ್ಕೆ ಕೆಲಸ ನಾವು ಮಾಡಬೇಕು. ಇದಕ್ಕೆ ಉಳಿದಿರುವುದು ಯಾವ ಮೂಲ ? ಸಣ್ಣ ನೀರಾವರಿ ಕ್ಷೇತ್ರ, ಎಲ್ಲ ವರ್ಗದ ಬೇಸಾಯಗಾರರಿಗೂ ನೀರನ್ನು ಒದಗಿಸುವುದಕ್ಕೆ ಸಾಧ್ಯ ಇದೆ. ಆದುದರಿಂದ ನಾವು ಉಕ್ಕಿನ ಕಾರ್ಖಾನೆಯನ್ನು ಹೊಸಪೇಟೆಯಲ್ಲಿ ಒಂದು ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿ ಸ್ಥಾಪನೆ ಮಾಡಬೇಕು. ಅಂಥ ನಾಲ್ಕು ಕಾರ್ಖಾನೆಗಳನ್ನು ಮಾಡಿದರೂ ಕೂಡ ನಮ್ಮ ಕರ್ನಾಟಕದ ಜನರಿಗೆ ಉದ್ಯೋಗವನ್ನಾಗಲೀ ಅನ್ನವನ್ನಾಗಲೀ ಸಂಪೂರ್ಣವಾಗಿ ಒದಗಿಸುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ವ್ಯವಸಾಯ ಕ್ಷೇತ್ರ, ನಮಗೆ ಬಹಳ ದೊಡ್ಡ ಕ್ಷೇತ್ರ. ಈ ಜನರನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗಿರಬೇಕಾದಂಥ ಸಂಜೀವಿನಿಯನ್ನು ನಾವು ನೀವು ತಿಳಿದುಕೊಂಡಿದ್ದೇವೆ. ಹೀಗಿರುವಾಗ ಅಂಥ ಸಂಜೀವಿನಿ ಕ್ಷೇತ್ರವಾದ ವ್ಯವಸಾಯಕ್ಕೆ, ನೀರಾವರಿ ವ್ಯವಸಾಯ ಆಗಬೇಕಾದರೆ, ಸಣ್ಣ ನೀರಾವರಿ ಕ್ಷೇತ್ರವನ್ನು ದೊಡ್ಡ ಪ್ರಮಾಣದಲ್ಲಿ ಮಾಡಬೇಕು. ಈ ವಿಷಯವನ್ನು ಬಹಳ ವಿಷಾದದಿಂದ ಇವತ್ತು ಹೇಳಬೇಕಾಗಿದೆ, ಸಣ್ಣ ನೀರಾವರಿ ಕ್ಷೇತ್ರವನ್ನು ಬಹಳ ದೊಡ್ಡದು ಮಾಡತಕ್ಕ ಕೆಲಸ ಒಳ್ಳೆಯದು, ಎಲ್ಲಾ ತಾಲ್ಲೂಕು ಮತ್ತು ಎಲ್ಲಾ ಗ್ರಾಮದಲ್ಲಿ ಬರತಕ್ಕ ಕೆಲಸ ಇದು. ಆದರೆ ಈ ಒಂದು ದೊಡ್ಡ ಪ್ರಮಾಣದ ವಿಚಾರವನ್ನು ಮಂತ್ರಿಮಂಡಲದಲ್ಲಿ ಚರ್ಚೆ ಮಾಡುವುದಕ್ಕೆ ಒಬ್ಬ ಕ್ಯಾಬಿನೆಟ್ ದರ್ಜೆಯ ಮಂತ್ರಿ ಇಲ್ಲ. ನಮ್ಮ ರಾಜ್ಯ ಸಚಿವರು ನೀರಾವರಿ ಕ್ಷೇತ್ರವನ್ನು ಪಡೆದಿದ್ದಾರೆ. ಪ್ರಮುಖವಾದ ತೀರ್ಮಾನವನ್ನು ಮಂತ್ರಿ ಮಂಡಲದ ಮಟ್ಟದಲ್ಲಿ ಕೈಗೊಳ್ಳಬೇಕು. ಮೇಜರ್‌ಗೆ ಹೋಗಿಬರಬೇಕು, ಮೇಜರ್‌ಗೆ ಹೋಗಿ ಬರುವುದರೊಳಗೆ ಹೆಣ್ಣೇ ಸಿಕ್ಕುತ್ತದೆ. ದೊಡ್ಡ ಮೀನು ಸಣ್ಣ ಮೀನನ್ನು ತಿಂದ ಹಾಗೆ, ದೊಡ್ಡಮೀನು ತಿಂದುಹಾಕುತ್ತದೆ. ದೊಡ್ಡ ಮೀನು ಹಿಡಿಯಬೇಕಾದರೆ, ಸಣ್ಣ ಮೀನನ್ನು ಗಾಳಕ್ಕೆ ಹಾಕಿ ಬಿಡಬೇಕು. ಇವತ್ತು ಸಣ್ಣಮೀನನ್ನು ದೊಡ್ಡ ಮೀನು ಹಿಡಿಯುವುದಕ್ಕೆ ಮಂತ್ರಿಮಂಡಲದ ಕೆರೆಗೆ ಹಾಕಿದರೆ, ಅದು ಹಾಗೆ ಬರುವುದಿಲ್ಲ. ದೊಡ್ಡ ಮೀನು ನುಂಗಿ ಬಿಡುತ್ತದೆ. ಅದು ಬರುವುದಿಲ್ಲ. ರಾಜ್ಯದ ಆಯವ್ಯಯದಲ್ಲಿ ಎಲ್ಲಿ ಹುಡುಕಿದರೂ ಕೂಡ ಎರಡರಿಂದ ಮೂರು ಕೋಟಿ ರೂಪಾಯಿ ಸಿಗಬಹುದು. ಸಣ್ಣ ನೀರಾವರಿಗೆ ನೇರವಾಗಿ ಅವರು ಇರುವುದರಿಂದ, ಸಣ್ಣ ನೀರಾವರಿ ಹೆಚ್ಚು ಕಡಿಮೆ ನಮ್ಮ ಸರ್ಕಾರದಲ್ಲಿ ಎಲ್ಲಿ ನೋಡಿದರೂ ೨ ರಿಂದ ೩ ಕೋಟಿ ರೂಪಾಯಿ ಖರ್ಚುಮಾಡಬಹುದು ಎನ್ನತಕ್ಕ ನಿರೀಕ್ಷಣೆ ಮಾಡಬಹುದು. ಇದಕ್ಕಿಂತ ಹೆಚ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಆಯವ್ಯಯದಲ್ಲಿ ತೋರಿಸಿದರು, ೪-೫ ಕೋಟಿ ರೂಪಾಯಿ ೩೦ನೇ ತಾರೀಖಿನವರೆಗೆ ಖರ್ಚು ಮಾಡಿದ್ದು ೨ ರಿಂದ ೩ ಕೋಟಿ ರೂಪಾಯಿ ನಾಮಕಾವಸ್ತೆಗೆ ಬಡ್ಜೆಟ್ಟಿನಲ್ಲಿ ಸೇರಿಸಿಕೊಂಡಿದ್ದಾರೆ. ತಾವು ಏನು ಆಗಿದ್ದೀರಿ, ಸಣ್ಣ ಮೀನು ಕೆರೆಗೆ ಹಾಕಿ ಅದು ಬರುವ ಹೊತ್ತಿಗೆ ದೊಡ್ಡ ಮೀನು ತಿಂದು ಹಾಕಿ ನಿಮ್ಮ ಕೈಗೆ ಏನು ಸಿಕ್ಕುವುದಿಲ್ಲ.

ನಮ್ಮ ಭಾಗದ ಜನ ಇಡೀ ಕರ್ನಾಟಕ ರಾಜ್ಯ ನಮ್ಮ ಕೈಯಲ್ಲಿರುವುದು, ಏನು ಇಲ್ಲ ಬರೀ ಕೈ. ದಕ್ಷಿಣ ಕನ್ನಡದ ಜನ ಒಬ್ಬ ಮಂತ್ರಿಗಳು ಹೇಳಿದರು, ನನ್ನ ಖಾತೆಯಾವುದು ಮಹಿಳೆ ಮತ್ತು ಮಕ್ಕಳ ಖಾತೆ, ಮಹಿಳೆಯರು ರಾಜ್ಯದಲ್ಲಿ ಅರ್ಧ ಭಾಗ, ಮಕ್ಕಳು ಕಾಲು ಭಾಗ, ಜನಸಂಖ್ಯೆಯ ಮುಕ್ಕಾಲು ಭಾಗದ ಖಾತೆಯನ್ನು ಹೊಂದಿರತಕ್ಕ ಮಂತ್ರಿ ಸ್ಥಾನ ಇಡೀ ಅಖಿಲಭಾರತದಲ್ಲಿಯೇ ಮೊದಲನೇ ಸಾರಿ ನನಗೆ ಕೊಟ್ಟಿದ್ದಾರೆ ಎಂದು. ನಾವು ಕರ್ನಾಟಕದವರು ಇತಿಹಾಸ ಪ್ರಸಿದ್ಧವಾದ ಕೆಲಸ ಮಾಡಿದ್ದೇವೆ ಎಂದು ಹೇಳಿದರೆ ಇದರಿಂದ ಊಹಿಸಬೇಕು. ಪತ್ರಿಕೆಯಲ್ಲಿ ದೊಡ್ಡದಾಗಿ ಬಂತು, ಎಷ್ಟು ದೊಡ್ಡ ಮಂತ್ರಿ ಸ್ಥಾನ ಕರ್ನಾಟಕಕ್ಕೆ ಕೊಟ್ಟಿದ್ದಾರೆ, ಎಲ್ಲೂ ಇಂಥ ಕೆಲಸ ಮಾಡಿಲ್ಲ ಎಂದು ಅವರೇ ಹೇಳಿಕೊಳ್ಳಬೇಕಾದರೆ, ಅದನ್ನು ಒಪ್ಪಿದೆ. ಈ ವರ್ಷ ಆಯವ್ಯಯ ನೋಡಿದೆ, ಮಹಿಳೆ ಖಾತೆ ಮತ್ತು ಮಕ್ಕಳ ಖಾತೆಗೆ ಎಷ್ಟು ದುಡ್ಡು ಹಾಕಿದ್ದಾರೆ ಎಂದು ಬಡ್ಜೆಟ್ ತೆಗೆದು ನೋಡಿದರೆ ಎಲ್ಲೂ ಆ ಖಾತೆ ಸಿಕ್ಕುವುದಿಲ್ಲ. ನಾನು ಕೇಳಿದ್ದು ಯಾವ ಖಾತೆಗೆ ಹಣ ತೆಗೆದುಕೊಂಡಿರುತ್ತಾರೆ.

ಶ್ರೀಮತಿ ವಿನಿಫ್ರೆಡ್ ಎಫ್. ಫರ್ನಾಂಡೀಸ್.—ಸೋಷಿಯಲ್ ವೆಲ್‌ಫೇರ್ ಖಾತೆಗೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅವರು ರಾಚಯ್ಯನವರಿಗೆ ಅಟಾಚ್ ಆಗಿದ್ದಾರೋ

ಶ್ರೀ ಕಾಗೋಡು ತಿಮ್ಮಪ್ಪ.—ಅಲ್ಲಿ ತಿಮಿಂಗಲ ಹಿಡಿಯುವುದಕ್ಕೆ ಸಣ್ಣ ಮೀನು ಹಾಕಿದ್ದಾರೆ. ಸಣ್ಣ ನೀರಾವರಿ ಮಂತ್ರಿಗಳ ಸ್ಥಿತಿ ಚಿಂತಾಜನಕವಾಗಿದೆ. ಅವರು ಆ ಸ್ಥಿತಿಯಲ್ಲಿದ್ದರೆ, ಇವರು ಈ ಸ್ಥಿತಿಯಲ್ಲಿದ್ದಾರೆ. ಒಟ್ಟಿನಲ್ಲಿ ನನ್ನ ಗಂಡ ಸರದಾರ ಸಂಬಳ ಇಲ್ಲ, ಸಾರಿಗೆ ಇಲ್ಲ. ಇಂಥ ಚಿಂತಾಜನಕ ಸ್ಥಿತಿ ಒಂದು ಕಡೆ ಇರಬೇಕಾದರೆ, ಮಂತ್ರಿಗಳ ಸ್ಥಿತಿಯೂ ಅಷ್ಟೇ ಚಿಂತಾಜನಕವಾಗಿದೆ. ನಮ್ಮ ಹಣಕಾಸಿನ ಸಚಿವರು ಇಲ್ಲಿಯೇ ಕೂತಿದ್ದಾರೆ, ಅವರನ್ನು ಮಂತ್ರಿ ಮಂಡಲಕ್ಕೆ ಸೇರಿಸಿಕೊಳ್ಳಿ. ನೂರಕ್ಕೆ ೯೫ ರಷ್ಟು ಪ್ರಮಾಣದಲ್ಲಿ ವ್ಯವಸಾಯಗಾರರ ಪ್ರತಿನಿಧಿ, ಅವರ ಸಂರಕ್ಷಕರು, ಅವರ ರಕ್ಷಾಕವಚ, ಅಂಥ ರಕ್ಷಾಕವಚ ಮಂತ್ರಿ ಮಂಡಲದ ಸಭೆಯಲ್ಲಿ ಇಲ್ಲದೆಹೋದರೆ, ಅದು ಯಾವ ಸಭೆ?

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಪೂರ್ತಿ ಬಕ್ಷಾ ಕವಚ.

ಶ್ರೀ ಕಾಗೋಡು ತಿಮ್ಮಪ್ಪ.—ಆದುದರಿಂದ ಸಣ್ಣ ನೀರಾವರಿ ಖಾತೆಯನ್ನು ಹೊಂದಿರತಕ್ಕ ಮಂತ್ರಿಗಳು ಕ್ಯಾಬಿನೆಟ್‌ನಲ್ಲಿ ಇರಲೇಬೇಕು. ಅವರು ಸಮರ್ಥರಾಗಿ ತಮಗೆ ಬೇಕಾದಂಥ ಹಣವನ್ನು ಒದಗಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ ಶ್ರೀಮಾನ್ ಚನ್ನಬಸಪ್ಪನವರು ಇವತ್ತು ಇದ್ದಾರೆ, ಅವರು ಲೋಕೋಪಯೋಗಿ ಖಾತೆ ಹೊಂದಿದ್ದಾರೆ. ಹೋದ ವರ್ಷ ರೂರಲ್ ಕಮ್ಯುನಿಕೇಷನ್ ೮೦ ಕಿಲೋಮೀಟರ್ಸ್ ತೆಗೆದುಕೊಂಡರು ಮೊದಲನೇ ವರ್ಷ ದುಡ್ಡು ಖರ್ಚು ಮಾಡಿದರು, ಎರಡನೇ ವರ್ಷ ದುಡ್ಡು ಕೊಡಲಿಲ್ಲ, ರಸ್ತೆಗಳೆಲ್ಲಾ ತುಳಿದು ತುಳಿದು ಮೂರು ವರ್ಷಗಳಲ್ಲಿ ರಸ್ತೆಯೇ ಸಿಕ್ಕದಹಾಗೆ ಆಯಿತು. ಈ ವರ್ಷ ಒತ್ತಾಯ ತರುವುದಕ್ಕೆ, ಕಸರತ್ತು ಮಾಡಿ, ಗಲಾಟೆ ಮಾಡಿ, ಎರಡು ಕೋಟಿ ರೂಪಾಯಿ ಈ ಬಗ್ಗೆ ಕೊಡುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ ಕಾಮಗಾರಿಗೋಸ್ಕರ ಕೊಡುತ್ತಾರೆಂಬ ಭರವಸೆ ಪಡೆದಿದ್ದಾರೆ. ಅವರು ಈ ಸದನದಲ್ಲಿ ಚರ್ಚೆ ಆಗತಕ್ಕ ಕಾಲದಲ್ಲಿ ಹೇಳಿದರು. ಅಂಥ ಭರವಸೆಯನ್ನು ನಮ್ಮ ಸಣ್ಣ ನೀರಾವರಿ ಮಂತ್ರಿಗಳು ಕೊಡುವುದಕ್ಕೆ ಆಗುವುದಿಲ್ಲ.

(Mr. Deputy Speaker. in the chair)

ಅಧ್ಯಕ್ಷರೆ, ಇವೊತ್ತು ಕುಸ್ತಿಕಣಕ್ಕೆ ಹೋದರೆ ತಾನೆ ಏನಾದರೂ ಒಂದು ಸ್ವಲ್ಪ ಹೊಡದುಕೊಂಡ ಬರುವುದಕ್ಕೆ ಸಾಧ್ಯ ಎಂದು ಹೇಳುತ್ತಾ ಇರುವುದು. ನಮ್ಮ ಸಣ್ಣ ನೀರಾವರಿ ಮಂತ್ರಿಗಳಿಗೆ ಹೆಚ್ಚು ಟ್ರೈನಿಂಗ್ ಇಲ್ಲದೇ ಇರುವುದರಿಂದ ಅವರಿಗೆ ಹೆಚ್ಚು ಹಣ ಒದಗಿಸದೇ ಇರುವುದು ಈ ದುರ್ಬಲತೆ ಇವೊತ್ತು ಏತಕ್ಕೆ ಬಂದಿದೆ ಎಂದರೆ ಅದು ಮುಖ್ಯ ಕಳವಳವಾಗಿದೆ. ಈ ದೃಷ್ಟಿಯಿಂದ ನಿರ್ಣಯ ಚರ್ಚೆಗೆ ಬಂದಿರತಕ್ಕದ್ದು ಬಹಳ ಒಳ್ಳೆಯದು ಎಂದು ನಾನು ಹೇಳುತ್ತೇನೆ. ಈವಾಗ ಒಂದು ದೊಡ್ಡ ಕಲ್ಪನೆ ಏನು ಇದೆ ಎಂದರೆ ನಾನು ಹೇಳಿದಹಾಗೆ ವ್ಯವಸಾಯಗಾರರಿಗೆ ನೀರು ಬಹಳ ಮುಖ್ಯ. ಇವೊತ್ತು ನೀರು ಇಲ್ಲದೆ ವ್ಯವಸಾಯ ಮಾಡುವುದು ಒಂದೇ ಮಾಡದೇ ಇದ್ದರೂ ಒಂದೇ ಅದು ಬಂಜರು ಭೂಮಿಯಾಗಿರುತ್ತದೆ. ಈ ವ್ಯವಸಾಯಗಾರರು ಎಷ್ಟೋ ಕಾಲದಿಂದ ವ್ಯವಸಾಯ ಮಾಡಿಕೊಂಡೇ ಬಂದಿದ್ದಾರೆ, ಅದರಿಂದ ಲಾಭ ಬರಲಿ ಅಥವಾ ನಷ್ಟವಾಗಲಿ ಒಟ್ಟಿನಲ್ಲಿ ವ್ಯವಸಾಯ ಮಾಡಿಕೊಂಡೇ ಇರುತ್ತಾರೆ. ಇವೊತ್ತು ದೇಶದಲ್ಲಿ ವ್ಯವಸಾಯಗಾರನಿಗೆ ಬೇರೆ ಏನೂ ಕಸಬು ಬರುವುದಿಲ್ಲ, ಅವನಿಗೆ ವ್ಯವಸಾಯದಲ್ಲಿ ಅಲ್ಪಸ್ವಲ್ಪ ಲಾಭ ಬಂದರೆ ಬದುಕಿಕೊಳ್ಳುತ್ತಾನೆ, ಇಲ್ಲ ಅಂದರೆ ಅವನು ಬದುಕಿಕೊಳ್ಳುವುದಕ್ಕೆ ಆಗುವುದಿಲ್ಲ. ಅಂತಹ ಪರಿಸ್ಥಿತಿ ಇವೊತ್ತಿನ ದಿವಸ ವ್ಯವಸಾಯಗಾರರಲ್ಲಿ ಇದೆ. ಮೊದಲು ವ್ಯವಸಾಯ ಮಾಡುತ್ತಾ ಇದ್ದವರು ಈಗಲೂ ವ್ಯವಸಾಯವನ್ನೇ ಮಾಡಬೇಕು ಇದರಿಂದ ಲಾಭ ಇದೆಯೇ ಇಲ್ಲವೇ ಎನ್ನುವ ಪರಿಜ್ಞಾನವೇ ಅವನಿಗೆ ಇರುವುದಿಲ್ಲ. ಈಗ ವಿಧಾನಸೌಧ ಎಲ್ಲಿದೆ ಅದರಲ್ಲಿ ಏನು ಕೆಲಸಗಳು ನಡೆಯುತ್ತದೆ ಎನ್ನುವುದೂ ಕೂಡ ಈ ವ್ಯವಸಾಯಗಾರರಿಗೆ ಗೊತ್ತಿರುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ವಿಧಾನಸೌಧ ಇದೆ ಎನ್ನುವುದೇ ಎಷ್ಟೋ ಜನರಿಗೆ ಗೊತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಇವೊತ್ತಿನ ದಿವಸ ವ್ಯವಸಾಯಗಾರನಿಗೆ ಆತನ ವ್ಯವಸಾಯದ ಕೆಲಸವನ್ನು ಒಂದು ಬಿಟ್ಟರೆ ಬೇರೆ ಕಲ್ಲು ಚೆಚ್ಚುವುದು ಆಗಲಿ, ರಸ್ತೆ ಕೆಲಸವಾಗಲಿ, ಬೇರೆ ಇತರೆ ಯಾವುದೇ ಕೆಲಸ ಆತನಿಗೆ ಬರುವುದಿಲ್ಲ. ಆತನಿಗೆ ನೇಗಿಲು ಹಿಡಿ ಎಂದರೆ ಮಾತ್ರ ನೇಗಿಲು ಹಿಡಿಯುವುದು ಒಂದು ಬರುತ್ತದೆ. ಆತನು ವ್ಯವಸಾಯ ಪ್ರಾರಂಭಮಾಡಿ ಅವನು ವ್ಯವಸಾಯದ ಎಲ್ಲಾ ಕೆಲಸಗಳನ್ನು ಮುಗಿಸಿಕೊಂಡು ಕೊನೆಗೆ ಸುಮಾರು ಎರಡು ಚೀಲ ರಾಗಿ ಅಥವಾ ಭತ್ತ ತರುವುದು ಉಂಟು. ಆತನಿಗೆ ಇದರಿಂದ ಲಾಭ ಇದೆಯೋ ಅಥವಾ ನಷ್ಟ ಆಗುತ್ತಿದೆಯೋ ಎನ್ನುವುದು ಗೊತ್ತಿರುವುದಿಲ್ಲ, ಕಾರಣ ಅವನು ದಡ್ಡನಾಗಿರುತ್ತಾನೆ, ಅವನಿಗೆ ಯಾವ ಒಂದು ವಿದ್ಯೆ ಇರುವುದಿಲ್ಲ, ತಿಳುವಳಿಕೆ ಇರುವುದಿಲ್ಲ, ಆತನಿಗೆ ಈ ಜಗತ್ತಿನ ಕಲ್ಪನೆ ಇರುವುದಿಲ್ಲ, ಅಲ್ಲದೇ ಅವನು ವ್ಯವಸಾಯ ಮಾಡತಕ್ಕ ಭೂಮಿ ನಿಸ್ಸಾರವಾಗಿರುತ್ತದೆ, ಆದುದರಿಂದ ವ್ಯವಸಾಯಗಾರನಿಗೆ ತಾನು ಮಾಡುವ ಭೂಮಿಯಲ್ಲಿ ಒಂದು ಬೆಳೆಗಾದರು ನೀರು ಸಿಕ್ಕುವ ವ್ಯವಸ್ಥೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ತಾವು ಬಾವಿಗಳನ್ನು ತೆಗೆಸಿ ಆದರ ಮುಖಾಂತರ ನೀರನ್ನು ಒದಗಿಸಿದರೂ ಸರಿಯೇ, ಸಣ್ಣ ಸಣ್ಣ ಕೆರೆಗಳನ್ನು ಕಟ್ಟಿಸಿ ಅವರ ಮುಖಾಂತರ ನೀರನ್ನು ಒದಗಿಸಿದರೂ ಸರಿಯೇ. ಯಾವುದಾದರು ಒಂದು ರೀತಿಯಲ್ಲಿ ವ್ಯವಸಾಯಗಾರನಿಗೆ ನೀರನ್ನು ಒದಗಿಸಿಕೊಡಬೇಕು ಎಂದು ಹೇಳುತ್ತೇನೆ. ಇವೊತ್ತಿನ ದಿವಸ ವ್ಯವಸಾಯಗಾರ ಗೆ ಒಂದೊಂದು ತೊಟ್ಟು ನೀರು ಸಿಕ್ಕಿದರೂ ಕೂಡ ಅವನು ಅದರಿಂದಲೇ ಒಂದು ಮೆಣಸಿನಕಾಯಿ ಗಿಡಕ್ಕೆ ಉಪಯೋಗಿಸಿಕೊಂಡು ಅನುಕೂಲ ಪಡೆಯುತ್ತಾನೆ. ಆದುದರಿಂದ ಎಲ್ಲಿ ಎಷ್ಟು ನೀರು ಸಿಕ್ಕಿದರೂ ಸರಿಯೇ ಆದನ್ನು ಎಲ್ಲಾ ಬಳಸಿಕೊಂಡು ಈ ವ್ಯವಸಾಯಗಾರನಿಗೆ ಅನುಕೂಲವಾಗುವಂತೆ ಒಂದು ಸಮಗ್ರವಾದ ಯೋಜನೆ ಮಾಡಬೇಕು ಅಂತಹ ಕಾಲ ಬಂದಿದೆ ಆದುದರಿಂದ ತಾವು ವ್ಯವಸಾಯಗಾರನಿಗೆ ಇಷ್ಟನ್ನಾದರೂ ಮಾಡಿಕೊಡಬೇಕು. ಇದನ್ನು ತಾವು ಮಾಡದೇ ಹೋದರೆ ಅವನನ್ನು ಚಂದ್ರಲೋಕಕ್ಕೆ ಕಳುಹಿಸಿಕೊಡುವುದಕ್ಕೆ ಆಗುತ್ತದೆಯೇ. ಇವೊತ್ತು ಈ ವ್ಯವಸಾಯಗಾರರಿಗೆ ಮನೆಗಳನ್ನು ಕಟ್ಟಿಸಿಕೊಡದೇ ಇದ್ದರೂ ಚಿಂತೆಯಿಲ್ಲ, ಅವರಿಗೆ ಯಾವುದೇ ಒಂದು ಸೌಲಭ್ಯವನ್ನು ತಾವು ಒದಗಿಸಿಕೊಡದೇ ಇದ್ದರೂ ಚಿಂತೆಯಿಲ್ಲ, ಅವರಿಗೆ ಈ ನೀರನ್ನು ಒದಗಿಸಿಕೊಡುವ ವ್ಯವಸ್ಥೆಯನ್ನಾದರೂ ಅನುಕೂಲವಾಗಿ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಇದರ ಬಗ್ಗೆ ಸಣ್ಣ ಸಣ್ಣ ಕೆರೆಗಳನ್ನು, ಸಣ್ಣ ಸಣ್ಣ ಪಿಕ್‌ಅಪ್‌ಗಳನ್ನು ಕಟ್ಟಿಸುವುದಕ್ಕೆ ಹಣ ಎರಡು ಸಾವಿರ ಅಲ್ಲ ಮೂರು ಸಾವಿರ ರೂಪಾಯಿ ಆದರೂ ಸರಿಯೆ, ಎಲ್ಲೆಲ್ಲಿ ನೀರಿನ ಅನುಕೂಲತೆಗಳು ಇದೆ ಅಲ್ಲೆಲ್ಲಾ ಈ ಸಣ್ಣ ಸಣ್ಣ ಕೆರೆಗಳನ್ನು ಪಿಕ್‌ಅಪ್‌ಗಳನ್ನು ಕಟ್ಟುವ ಒಂದು ಸಮಗ್ರವಾದ ಯೋಜನೆ ಮಾಡಬೇಕು. ಇವೊತ್ತಿನದಿವಸ ನಮ್ಮ ವ್ಯವಸಾಯಗಾರರು ನೂರಕ್ಕೆ ಎಂಭತ್ತರಷ್ಟು ಇದ್ದರೂ ಕೂಡ ಅವರು ಬೆಳೆಯುವುದು ಅವರಿಗೆ ಸಾಕಾಗುವುದಿಲ್ಲ, ಇನ್ನು ಉಳಿದವರಿಗೆ ಎಲ್ಲಿಂದ ಕೊಡುತ್ತಾರೆ. ಇದು ವಿಪರ್ಯಾಸವಾಗಿದೆ.

MR. DEPUTY SPEAKER.—In other countries, it is just opposite.

ಶ್ರೀ ಕಾಗೋಡು ತಿಮ್ಮಪ್ಪ.—ಬೇರೆ ದೇಶಗಳಲ್ಲಿ ೮೦ ಪರ್‌ಸೆಂಟ್ ಜನರಿಗೆ ಆಹಾರ ಒದಗಿಸುತ್ತಾರೆ, ಇವೊತ್ತು ಅಮೇರಿಕದಲ್ಲಿ ೮೮ ಪರ್‌ಸೆಂಟ್ ಜನ ಮಾತ್ರ ವ್ಯವಸಾಯ ಮಾಡುತ್ತಿದ್ದಾರೆ. ಅದರೂ ಅವರಿಗೆ ತೊಂದರೆಯಾಗುತ್ತಾ ಇಲ್ಲ. ಅಷ್ಟೊಂದು ಆಹಾರವನ್ನು ಅವರು ಬೆಳೆಯುತ್ತಿದ್ದಾರೆ. ಅನೇಕ ಸಾರಿ ಮಾರ್ಕೆಟ್ಟಿನಲ್ಲಿ ಹೆಚ್ಚಾಗಿ ಬೆಲೆ ಕುಸಿಯುತ್ತದೆ ಎಂದು ತಿಳಿದರೆ ಅವರು ಬೆಳೆದಿದ್ದನ್ನು ತೆಗೆದುಕೊಂಡು ಹೋಗಿ ಸಮುದ್ರಕ್ಕೆ ಹಾಕುತ್ತಾರೆ. ಆದುದರಿಂದ ತಾವು ನಮ್ಮ ವ್ಯವಸಾಯಗಾರರಿಗೆ ಯಾವ ಸೌಲಭ್ಯಗಳನ್ನೂ ಕೊಡದೇ ಇದ್ದರೂ ಚಿಂತೆ ಇಲ್ಲ, ಅವರಿಗೆ ನೀರನ್ನು ಕೊಡುವ ವ್ಯವಸ್ಥೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈಗ ನಮ್ಮಲ್ಲಿ ೮೦ ಪರ್‌ಸೆಂಟ್ ವ್ಯವಸಾಯಗಾರರು ಇದ್ದಾರೆ, ಅವರು ಬೆಳೆಯತಕ್ಕ ಧಾನ್ಯ ಅವರಿಗೆ ಸಾಕಾದರೆ ಸಾಕು. ಇನ್ನುಳಿದ ೨೦ ಪರ್‌ಸೆಂಟ್ ಜನರಿಗೆ ಬೇಕಾದರೆ ತಾವು ಆಹಾರ ಧಾನ್ಯವನ್ನು ಆಮದು ಮಾಡಿಕೊಂಡು ಬೇಕಾದರೆ ಕೊಡಿ. ಈ ವ್ಯವಸಾಯಗಾರರಿಗೆ ೧೨ ತಿಂಗಳು ಒಂದು ಸ್ವಲ್ಪ ಗಂಜಿಯನ್ನಾದರೂ ಕುಡಿದುಕೊಂಡು ಚೆನ್ನಾಗಿ ಇರಿ ಎಂದು ಹೇಳಿ ಇವರಿಗೆ ಏನು ಅಶೋಕ ಹೋಟೆಲ್ ಫ್ರೈ ಚಿಕನ್ ಏನೂ ಬೇಕಾಗಿಲ್ಲ. ಇವರಿಗೆ ವರ್ಷದ ೧೨ ತಿಂಗಳು ಕುಡಿಯಲಿಕ್ಕೆ ಸ್ವಲ್ಪ ಗಂಜಿ ಸಿಕ್ಕಿದರೆ ಸಾಕು. ಅವರ ಮಕ್ಕಳಿಗೆ ಕಾಫಿ ಅಥವಾ ಹಾಲು ಬೇಡ, ಅವರಿಗೆ ರಾಗಿ ಅಂಬಲಿ ಸಿಕ್ಕಿದರೆ ಸಾಕಾಗಿದೆ. ಇವೊತ್ತಿನ ದಿವಸ ಈ ವ್ಯವಸಾಯಗಾರರ ಸಂಸಾರದಲ್ಲಿ ಪ್ರತಿಯೊಬ್ಬರಿಗೂ ವರ್ಷದ ೧೨ ತಿಂಗಳು ಗಂಜಿ ಸಿಕ್ಕುವ ವ್ಯವಸ್ಥೆ ಆಗಿಬಿಟ್ಟರೆ ಅವೊತ್ತೇ ದೇಶದಲ್ಲಿ ಸ್ವರ್ಗ ನಿರ್ಮಾಣವಾಗುತ್ತದೆ ಎಂದು ಹೇಳುತ್ತೇನೆ. ಅಲ್ಲದೇ ಇವೊತ್ತಿನ ದಿವಸ ಹರಿಜನ ಗಿರಿಜನರ ಮನೆಯಲ್ಲಿ ಎರಡು ಸೇರು ರಾಗಿ ಆಗಲಿ, ಅಥವಾ ಎರಡು ಸೇರು ಅಕ್ಕಿಯಾಗಲಿ ಇರುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಾವು ಮಾನ್ಯ ರಾಚಯ್ಯನವರ ಮನೆಗೆ ಹೋಗಿ ನೋಡಿ.

ಶ್ರೀ ಎನ್. ರಾಚಯ್ಯ.— ತಾವು ಹೋಟೆಲ್ ಅಶೋಕ ಹೇಳಿದಿರಿ, ಅದು ಫಾರಿನರ್ಸ್‌ಗಳಿಗೋಸ್ಕರ ಇರುವುದು.

ಶ್ರೀ ಕಾಗೋಡು ತಿಮ್ಮಪ್ಪ.-ಮನೆಗೆ ಮಾರಿ ಪರರಿಗೆ ಉಪಕಾರಿ ಎಂದ ಹಾಗೆ. ಮೊನ್ನೆ ಇಂಡಸ್ಟ್ರೀಸ್ ಮಿನಿಸ್ಟರ್ ಹೇಳಿದರು, ಬೇರೆ ದೇಶದವರಿಗೆ ತೋಟದಪ್ಪನ ಚತ್ರದಲ್ಲಿ ಉಪಚರಿಸುವುದಕ್ಕೆ ಆಗುತ್ತದೆಯೇ ಎಂದು.

Mr. Deputy Speaker.—We are discussing Minor Irrigation.

ಶ್ರೀ ಎಸ್. ಬಂಗಾರಪ್ಪ.-ನಾರ್ತ್ ವಿಯಟ್ನಾಮಿನ ಹೋಚಿಮಿನ್ ಅವರು ಎಲ್ಲಿ ಹೋಗಬೇಕಾದರೂ ಅವರು ಸ್ಪೆಷಲ್ ಬಟ್ಟೆಗಳನ್ನು ಹಾಕಿಕೊಂಡು ಹೋಗುತ್ತಾ ಇರಲಿಲ್ಲ. ಅವರು ಮಲಗುವಾಗ ಒಳ್ಳೆಯ ಹಾಸಿಗೆಗಳನ್ನು ಹಾಕಿಕೊಳ್ಳುತ್ತಾ ಇರಲಿಲ್ಲ, ಒಂದು ಚಾಪೆಯ ಮೇಲೆ ಮಲಗಿಕೊಳ್ಳುತ್ತಿದ್ದರು. ಅವರಲ್ಲಿ ಇದ್ದದ್ದು ಎರಡು ಕೋಟುಗಳು ಮಾತ್ರ. ಅವರು ಹಾಗೆ ಇದ್ದರು ಎನ್ನುವ ವಾದ ಅಲ್ಲ, ಅವರು ತಮ್ಮ ಕೊನೆಯ ಉಸಿರು ಎಳೆಯುವವರೆಗೂ ಹಾಗೇ ಇದ್ದರು. ಈಗ ನೋಡಿದರೆ ಎಲ್ಲಿ ಹೋಗಬೇಕಾದರೂ ಇಸ್ತ್ರಿ ಬಟ್ಟೆಗಳನ್ನು ಹಾಕಿಕೊಂಡು ರೆಡಿಯಾಗಿ ನಿಂತಿರುತ್ತಾರೆ.

Mr. Deputy Speaker.— When he was in Delhi, he was offered a golden chair during a reception. He refused to sit on it. He took an ordinary chair and sat on it.

Sri C. Byre Gowda.—That is why to-day, they are victorious,

ಶ್ರೀ ಕಾಗೋಡು ತಿಮ್ಮಪ್ಪ.—ಆದುದರಿಂದ ಇವೊತ್ತು ನಾನು ಹೇಳುತ್ತೇನೆ, ವ್ಯವಸಾಯಗಾರರು ಸಣ್ಣ ಅಕ್ಕಿ ಎಂದು ನಿರೀಕ್ಷೆ ಮಾಡುವುದು ಅಲ್ಲ. ಪ್ರತಿಯೊಂದು ಮನೆಗೂ ಎರಡು ಹೊತ್ತು ಊಟ ೧೨ ತಿಂಗಳ ಕಾಲ ಸಿಕ್ಕತಕ್ಕ ವ್ಯವಸ್ಥೆ ಆಗಬೇಕು. ಇವೊತ್ತಿನ ದಿವಸ ಈ ವ್ಯವಸಾಯಗಾರರು ತಾವು ಬೆಳೆದ ಆಹಾರವನ್ನು ಬೇರೆಯವರಿಗೆ ಕೊಡುವುದಕ್ಕೆ ಆಗದೇ ಇದ್ದರೂ ಸರಿಯೇ ತಮಗಾದರೂ ಸಾಕಾಷ್ಟು ಬೆಳೆದುಕೊಂಡರೆ ಸಾಕಾಗಿದೆ ಎಂದು ಹೇಳುತ್ತೇನೆ. ಇವೊತ್ತು ದೇಶದ ದೃಷ್ಟಿಯಿಂದ ಎಷ್ಟು ಕೆಲಸವನ್ನು ಮಾಡಿಸುವುದಕ್ಕೆ ಸಾಧ್ಯ ಇದೆ ಅಷ್ಟು ಕೆಲಸವನ್ನು ಮಾಡಿಸುವುದಕ್ಕೆ ಸಾಧ್ಯವಾದರೆ ಅದು ಮಹತ್‌ಸಾಧನೆ ಎಂದು ಹೇಳಿ ನಾವೆಲ್ಲರೂ ಮೆಚ್ಚಿಕೊಳ್ಳುತ್ತೇವೆ. ಆ ಸಾಧನೆ ಮಾಡಬೇಕಾದರೆ ಇವೊತ್ತು ಏನಾಗಿದೆ ಎಂದರೆ ಅದರ ಬಗ್ಗೆ ಅಂಕಿಅಂಶಗಳನ್ನು ಕೊಟ್ಟು ಚರ್ಚೆ ಮಾಡಬೇಕಾಗಿದೆ.......

Mr. Deputy Speaker.— The Hon. Member may continue his speech tomorrow.

The House no stands adjourned to meet again at 1-00 p. m. tomorrow.

The House adjourned at Six of the Clock to meet again at One of the Clock on Wednesday the 2nd April 1975.